ಆಶಯದೊಂದಿಗೆ ನೆರವೇರುವ ಈ ಸಮ್ಮೇಳನದಲ್ಲಿ ದಿನವೊಂದಕ್ಕೆ ಸುಮಾರು 1ಲಕ್ಷದಷ್ಟು ಜನರು ಭಾಗವಹಿಸುವ ಸಾಧ್ಯತೆಗಳಿದ್ದು, 35,000ಕ್ಕೂ ಅಧಿಕ ಮಂದಿ ಸದಸ್ಯತ್ವ ಪಡೆದು ನಿರಂತರ ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ವಿವಿಧ ಕ್ಷೇತ್ರಗಳ ವಿಷಯ ತಜ್ಞರು, ಸಂಪನ್ಮೂಲ ವ್ಯಕ್ತಿಗಳು ಬೌದ್ಧಿಕ– ವೈಚಾರಿಕ ಚರ್ಚೆಗಳನ್ನು, ಗೋಷ್ಠಿಗಳನ್ನು ನಡೆಸಲಿದ್ದು, ನುಡಿಸಿರಿಯ ಪ್ರಬುದ್ಧತೆಗೆ ಸಾಕ್ಷಿಯಾಗಲಿದ್ದಾರೆ. ಇನ್ನು ಸುಮಾರು 100 ಎಕರೆ ಜಾಗದಲ್ಲಿ 12 ವೇದಿಕೆಗಳಲ್ಲಿ ಸಂಜೆ ಏಕಕಾಲಕ್ಕೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದ್ದು ಇದು ಸಮ್ಮೇಳನದ ಕಲಾ ಪ್ರೌಢಿಮೆಗೆ ಕನ್ನಡಿ ಹಿಡಿಯಲಿದೆ. ಕರ್ನಾಟಕದ ವೈವಿಧ್ಯಮಯ ಶಾಸ್ತ್ರೀಯ ಕಲೆಗಳು, ಜನಪದೀಯ ಕಲೆಗಳು ಹಾಗೂ ಸಂಗೀತ ಲೋಕದ ವಿಶಿಷ್ಟ ಪ್ರಯೋಗಗಳು ಈ ಬಾರಿ ಆಸಕ್ತರ ಮನಸೂರೆಗೊಳ್ಳಲು ಸಿದ್ಧವಾಗಿವೆ. ಬಾಲಕ–ಬಾಲಕಿ, ಯುವಕ–ಯುವತಿ, ಪ್ರಬುದ್ಧರು, ಹಿರಿಯರು, ಶ್ರೀಸಾಮಾನ್ಯರು ಹೀಗೆ ಆಬಾಲವೃದ್ಧರಾದಿಯಾಗಿ ಎಲ್ಲಾ ಸ್ತರದ ಜನರನ್ನು ಆಕರ್ಷಿಸುವ ಆಶಯದೊಂದಿಗೆ ಕಾರ್ಯಕ್ರಮಗಳು ನಡೆಯಲಿವೆ.

ಆಳ್ವಾಸ್ ವಿದ್ಯಾರ್ಥಿಸಿರಿ

ಆಳ್ವಾಸ್ ನುಡಿಸಿರಿಗೆ ಪೂರ್ವಭಾವಿಯಾಗಿ ನವೆಂಬರ್ 30 ರಂದು ಒಂದು ದಿನದ ವಿದ್ಯಾರ್ಥಿ ಸಾಹಿತ್ಯ ಸಮ್ಮೇಳನ 'ಆಳ್ವಾಸ್ ವಿದ್ಯಾರ್ಥಿ ಸಿರಿ' ಯು ನಡೆಯಲಿದೆ. ವಿದ್ಯಾರ್ಥಿಗಳೇ ಅಧ್ಯಕ್ಷರು, ಸಂಪನ್ಮೂಲ ವ್ಯಕ್ತಿಗಳು ಆಗಿದ್ದು, ಜೊತೆಗೆ ಮಕ್ಕಳ ಸಾಹಿತ್ಯ ಕ್ಷೇತ್ರದ ಹಿರಿಯರು ಭಾಗವಹಿಸುತ್ತಾರೆ. ಖ್ಯಾತ ಮಕ್ಕಳ ಸಾಹಿತಿಯೊಬ್ಬರನ್ನು ಈ ಸಂದರ್ಭದಲ್ಲಿ 'ಆಳ್ವಾಸ್ ವಿದ್ಯಾರ್ಥಿ ಸಿರಿ' ಪ್ರಶಸ್ತಿ ನೀಡಿ 25,000 ನಗದಿನೊಂದಿಗೆ ಗೌರವಿಸಲಾಗುತ್ತದೆ.

ಈ ಬಾರಿ ವಿದ್ಯಾರ್ಥಿ ಸಿರಿಯ ಅಧ್ಯಕ್ಷರಾಗಿ ಉಜಿರೆಯ ಎಸ್‌ಡಿಎಂ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿ ಅರ್ಜುನ್ ಶೆಣೈ ಆಯ್ಕೆಯಾಗಿದ್ದಾರೆ.  ವಿದ್ಯಾರ್ಥಿ ಕವಿಗೋಷ್ಠಿ ಅಧ್ಯಕ್ಷತೆಯನ್ನು ಕಾಸರಗೋಡು ಚಿನ್ಮಯಿ ವಿಶ್ವವಿದ್ಯಾಲಯದ 8ನೇ ತರಗತಿ ವಿದ್ಯಾರ್ಥಿನಿ ಸನ್ನಿಧಿ ಟಿ.ರೈ ಪೆರ್ಲ ವಹಿಸಲಿದ್ದಾರೆ. ವಿದ್ಯಾರ್ಥಿಸಿರಿಯ ಸಮಾರೋಪ ಭಾಷಣವನ್ನು ಉಡುಪಿಯ ಒಳಕಾಡು ಸರ್ಕಾರಿ ಸಂಯುಕ್ತ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿ ನಚಿಕೇತ್ ನಾಯಕ್ ಮಾಡಲಿದ್ದಾರೆ.

## ಆಳ್ವಾಸ್ ಚಿತ್ರಸಿರಿ

ಚಿತ್ರಕಲೆ, ವರ್ಣಚಿತ್ರಕಲೆಗಳು ಕೂಡ ಕನ್ನಡ ಸಂಸ್ಕೃತಿಯ ಭಾಗವಾಗಿದ್ದು, ಈ ಕಲೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಪ್ರತಿವರ್ಷ 'ಆಳ್ವಾಸ್ ಚಿತ್ರಸಿರಿ'ಯನ್ನು ಆಯೋಜಿಸಲಾಗುತ್ತದೆ. ಈ ಬಾರಿ ನವೆಂಬರ್ 23ರಿಂದ ಆಳ್ವಾಸ್ ಚಿತ್ರಸಿರಿ ನಡೆಯಲಿದ್ದು ರಾಜ್ಯದ ನೂರಕ್ಕೂ ಹೆಚ್ಚು ಖ್ಯಾತ ಚಿತ್ರ ಕಲಾವಿದರು ತಮ್ಮ ಪ್ರತಿಭೆಯನ್ನು ಣ್ಣದ ಕುಂಚಗಳ ಮೂಲಕ  ಅನಾವರಣಗೊಳಿಸುತ್ತಾರೆ. ಇಲ್ಲಿಯು ಖ್ಯಾತ ಚಿತ್ರಕಲಾವಿದರೊಬ್ಬರನ್ನು 10,000 ನಗದಿನೊಂದಿಗೆ ಆಳ್ವಾಸ್ ಚಿತ್ರಸಿರಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಕೃಷಿಸಿರಿ

ಈ ಬಾರಿ ನುಡಿಸಿರಿಯ ಜೊತೆಗೇ ಕೃಷಿಸಿರಿ ಉದ್ಘಾಟನೆಗೊಳ್ಳಲಿದ್ದು, ಸುಮಾರು ಆರು ಎಕರೆ ಪ್ರದೇಶ ಇದಕ್ಕಾಗಿ



